1	2	3	4
2000-01	ಡಿಡಿಎಫ್	-	-
	ಎಎಫ್ಎಫ್	0.310	0.310
	ಆರ್ಎಸ್ಪಿ	-	-
	ಜಿವಿಎ	-	-
	ಕೆಎಫ್ಡಿಎಫ್	0.182	0.182
	ಓಇಸಿಎಫ್	39.298	37.672
	ಕಾಂಪೆನ್ಸೆಟರಿ	1.775	1.775
2001-02	ಡಿಡಿಎಫ್	-	-
	ಎಎಫ್ಎಫ್	0.165	0.165
	ಆರ್ಎಸ್ಪಿ	-	-
	ಜಿವಿಎ	-	-
	ಕೆಎಫ್ಡಿಎಫ್	0.062	0.062
	ಓಇಸಿಎಫ್	37.383	36.474
	ಕಾಂಪೆನ್ಸೆಟರಿ	3.879	3.879

ಆ)

ಕಾರ್ಯಕ್ರಮವಾರು ಮಾಹಿತಿ ಈ ಕೆಳಕಂಡತಿವೆ:-

		1999-2000	2000-01	2001-02
1.	ನೆಡುತೋಪು ಬೆಳೆಸಿರುವುದು	336. ಹೆ.	36ಹೆ.	88 ಹೆ.
2.	ನೆಡುತೋಪುಗಳು ನಿರ್ವಹಣೆ	644 ಹೆ.	943 ಹೆ.	965 ಹೆ
3.	ಸಸಿಗಳನ್ನು ಬೆಳೆಸಿರುವುದು	10.10 ಲಕ್ಷ	3.202 ಲಕ್ಷ	1.626 ಲಕ್ಷ

ಈ ಮೇಲ್ಕಂಡ ಕಾಮಗಾರಿಗಳು ಪೂರ್ಣಗೊಂಡಿವೆ.

ದೇಶದ ಸಿಪಾಯಿಗಳ ಭೂ ಮಂಜೂರಾತಿ ಅರ್ಜಿಗಳು

200 (279) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಭೂ ಮಂಜೂರಾತಿ 5ನೇ ನಿಯಮದ ಪ್ರಕಾರ ಈಗ ಹಾಲೀ ಸೈನಿಕರಾಗಿ ಕೆಲಸ ಮಾಡುತ್ತಿರುವ ಸೈನಿಕರು ಚಿಂತಾಮಣಿ ಕ್ಷೇತ್ರದ ನಲ್ಲಿರಾಳ್ಳನಲ್ಲಿ ಗ್ರಾಮ ಪ್ರದೇಶದಲ್ಲಿ ಇದ್ದು ಭೂ ಮಂಜೂರಾತಿಯನ್ನು ಮಾಡಬೇಕೆಂದು ಅರ್ಜಿ ಸಲ್ಲಿಸುವುದು ನಿಜವೇ;

ಆ) ಯಾವ ದಿನಾಂಕಗಳಂದು ಆ ಸೈನಿಕರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಸದರಿ ಅರ್ಜಿಗಳನ್ನು ವಿಲೇ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ದೇಶದ ರಕ್ಷಣೆಗೆ ಪ್ರಾಣ ಕೊಡುತ್ತಿರುವ ಸಿಪಾಯಿಗಳಿಗೆ ಭೂ ಮಂಜೂರಾತಿ ಪಡೆಯಲು ಕಾನೂನು ಪ್ರಕಾರ ಅವಕಾಶ ಇದ್ದರೂ ಸಹ ಮಂಜೂರಾತಿ ಮಾಡದೇ ತೊಂದರೆ ಕೊಡುವ ಪ್ರವೃತ್ತಿ ಸರಿಯೇ; ವಿವರ ತಿಳಿಸುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೌದು.

ಆ) ಹೌದು. ಸದರಿ ಅರ್ಜಿದಾರರಿಗೆ ದಿನಾಂಕ 28-8-1996ರಲ್ಲಿ ಮತ್ತು 21-1-2001 ರಲ್ಲಿ ಪ್ರತಿಭಾರಿ 2-00 ಎಕರೆ ಸೇರಿ ಒಟ್ಟು 4-00 ಎಕರೆ ಜಮೀನು ಮಂಜೂರು ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಹೊಂಗಳಲ್ಲಿ ದಾರಿ ಕಲ್ಪಿಸುವುದು

201 (610) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ವ್ಯವಹಾಸ ಮಾಡುತ್ತಿರುವ ಅನೇಕ ರೈತರು ತಮ್ಮ ಹೊಲಗಳಿಗೆ ಹೋಗಲು ದಾರಿ ಇಲ್ಲದೆ ಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗದರೆ ಸರ್ಕಾರ ಈ ಕುರಿತು ಯಾವ ಕ್ರಮ ಕೈಗೊಂಡಿದೆ.

ಆ) ಒಂದು ಸರ್ವೆ ನಂಬರಿನಲ್ಲಿರುವ ಭೂಮಾಲೀಕರು ಅವಿಭಕ್ತ ಕುಟುಂಬದ ಸದಸ್ಯರು ವಿಭಜನೆಯಾಗಿ ತಮ್ಮ ಹೊಲಗಳಿಗೆ ತಲುಪಲು ಕಡ್ಡಾಯವಾಗಿ ಪ್ರತಿ ಸರ್ವೆ ನಂಬರಿನಲ್ಲಿಯೂ ದಾರಿ ಕಾಯ್ದಿರಿಸುವಂತೆ ಸರ್ಕಾರ ಕಾನೂನು ಹೊಂದಿದೆಯೇ;

ಇ) ರಸ್ತೆ ಹಕ್ಕನ್ನು ಹೊಂದಿದರೆ ರೈತರಿಗೆ ಆಗುವ ತೊಂದರೆಗಳಿಗೆ ಅನೇಕ ವ್ಯವಸಾಯಗಾರರು ಕಷ್ಟಗಳನ್ನು ಅನುಭವಿಸುತ್ತಿದ್ದು ಈ ಕುರಿತು ಸರ್ಕಾರವು ಹೊಸ ಕಾಯ್ದೆ ರೂಪಿಸುವುದು ಅವಶ್ಯಕ ಅನಿಸುವುದಿಲ್ಲವೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಜಮೀನುಗಳಿಗೆ ರಸ್ತೆ ಸೌಕರ್ಯ ಕಲ್ಪಿಸಲು ಭೂ ದಾಖಲೆಗಳ ಇಲಾಖೆಯವರು ರಸ್ತೆಗಳನ್ನು ನಕ್ಷೆಯಲ್ಲಿ ಅಳವಡಿಸಿರುತ್ತಾರೆ. ಸರ್ಕಾರಿ ಜಮೀನು ಲಭ್ಯವಿದ್ದಲ್ಲಿ ರಸ್ತೆಗಾಗಿ ಜಮೀನು ಕಾಯ್ದಿರಿಸಲಾಗುವುದು. ಈಗಾಗಲೇ ನಕಾಶೆಯಲ್ಲಿ ಕಾಯ್ದಿರಿಸಿದ ರಸ್ತೆಗಳನ್ನು ಒತ್ತುವರಿ ಮಾಡಿದ್ದಲ್ಲಿ ಖುಲ್ಲಾಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಇಲ್ಲ.

ಇ) ಇಲ್ಲ.